ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಉಡುಪಿ ಮತ್ತು ಬೆಂಗಳೂರು ಹಾಗೂ ಬೆಂಗಳೂರು ಮತ್ತು ಉಡುಪಿ ಮಧ್ಯೆ ಓಡಾಡುತ್ತಿರತಕ್ಕ ಸಾರಿಗೆ ಸಂಸ್ಥೆಯ ಬಸ್ಸನ್ನು ನಿಲ್ಲಿಸಿದ್ದಾರೆನ್ನುವುದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಯಾವ ಕಾರಣದಿಂದ ಆ ಬಸ್ಸನ್ನು ನಿಲ್ಲಿಸಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಮಳೆಗಾಲದಿಂದಲೋ, ಟ್ರಾಫಿಕ್ ಕಡಿಮೆ ಎನ್ನುವ ಕಾರಣವೋ ಎಂಬುದನ್ನು ನಾನು ತಿಳಿದುಕೊಂಡು 2 ದಿವಸದೊಳಗೆ ವರದಿಯನ್ನು ಸಲ್ಲಿಸುತ್ತೇನೆ. ಮತ್ತೆ, ಆ ರೀತಿಯಾಗಿ ನಿಲ್ಲಿಸಿದ್ದು ನಿಜ ಇದ್ದಲ್ಲಿ ಅದನ್ನು ಮತ್ತೆ ಪ್ರಾರಂಭ ಮಾಡಲು ಸಹ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಹೊಸ ಜಿಲ್ಲಾ ರಚನೆ ಕುರಿತು ಅಧಿಸೂಚನೆ

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಸಭಾಧ್ಯಕ್ಷರೆ, ಮೊನ್ನೆಯ ಶುಕ್ರವಾರದ ದಿವಸ, ಹೊಸ ಜಿಲ್ಲಾ ರಚನೆಯಲ್ಲಿ ಅಧಿಸೂಚನೆ ಹೊರಡಿಸಬೇಕಾದರೆ, ಆ ಜಿಲ್ಲೆಯ ಸಂಬಂಧಪಟ್ಟ ಶಾಸಕರ ಜೊತೆ ಚರ್ಚೆ ಮಾಡುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳಾದ ಶ್ರೀ ಎಂ. ಪಿ. ಪ್ರಕಾಶ್ ಸಾಹೇಬರು ನಮಗೆ ಕೊಟ್ಟಿದ್ದರು. ನನಗೆ ಈಗ ಬಂದ ಮಾಹಿತಿ ಪ್ರಕಾರ, ಈಗಾಗಲೇ ಅಧಿಸೂಚನೆಯನ್ನು ಹೊರಡಿಸಲಿಕ್ಕೆ ಆದೇಶ ಹೋಗಿದೆ. ಅದು ಸರಿಯೂ ಇರಲಿಕ್ಕಿಲ್ಲ. ದಯವಿಟ್ಟು, ಆ ರೀತಿಯಾಗಿ ಏನಾದರೂ ಹೋಗಿದ್ದರೆ, ಅದನ್ನು ತಾವು ನಿಲ್ಲಿಸಬೇಕು. ಈಗ ಆ ಅಧಿಸೂಚನೆ ಪ್ರಕಾರ, ಗದಗ್ ಜಿಲ್ಲೆಗೆ ನವಲಗುಂದ ಸೇರುವುದಿಲ್ಲವೆಂಬ ಮಾಹಿತಿ ಇದೆ. ನವಲಗುಂದದೊಳಗೆ 57 ಹಳ್ಳಿಗಳಿವೆ. ಆ 57 ಹಳ್ಳಿಯಲ್ಲಿ 8 ಹಳ್ಳಿಗಳು ಮಾತ್ರ ಧಾರವಾಡಕ್ಕೆ ಸಮೀಪವಿದೆ, ಗದಗ್‌ಜಿಲ್ಲೆಗಿಂತ ಸಮೀಪ ಇವೆ. ಉಳಿದ 49 ಹಳ್ಳಿಗಳು ಗದುಗಿನ ಸಮೀಪ ಬರುತ್ತವೆ. ಆಮೇಲೆ, 2 ನಗರ ಪ್ರದೇಶಗಳು ಗದುಗಿಗೆ ಸಮೀಪ ಬರುತ್ತವೆ. ಇಷ್ಟಿದ್ದರೂ, ಅವರು ಗದಗ್ ಬಿಟ್ಟು, ಧಾರವಾಡಕ್ಕೆ ಕಳುಹಿಸುತ್ತೇವೆಂದರೆ, ಯಾವ ಕಾರಣಕ್ಕೆ ಕಳುಹಿಸುತ್ತಾರೆ? ನಿಮಗೆ ಯಾವುದೂ ಗೈಡ್‌ಲೈನ್ಸ್ ಇಲ್ಲವೇ? ತಾಲ್ಲೂಕನ್ನು ಕೂಡಿಸಲು ಮತ್ತು ಹೊರಗಿಡಲು ನಿಮಗೆ ಗೈಡ್‌ಲೈನ್ಸ್ ಇಲ್ಲವೆ? ಡಿ.ಆರ್.ಪಾಟೀಲರಿಗೆ ಬೇಕಾದ್ದು ಕೂಡಿಸಿದಿರಿ, ಎಸ್.ಎಸ್ ಪಾಟೀಲರಿಗೆ ಬೇಕಾದ್ದು ಬಿಟ್ಟಿರಿ. ಇದು ಅಗಬಾರದು. ದಯವಿಟ್ಟು, ಒಂದು ನಿರ್ದಿಷ್ಟವಾದ ಗೈಡ್‌ಲೈನ್ಸ್ ಪ್ರಕಾರ, ನೀವು ತಾಲ್ಲೂಕನ್ನು ಕೂಡಿಸುವುದು, ಬಿಡುವುದು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಅಧಿಸೂಚನೆ ಇವತ್ತು ಪ್ರಿಂಟ್ ಆಗುವುದಕ್ಕೆ ಪೂರ್ವದಲ್ಲೇ ಅದನ್ನು ತರಿಸಿಕೊಂಡು, ನಮ್ಮ ಜೊತೆ ಚರ್ಚೆ ಮಾಡಿ ಭೌಗೋಳಿಕವಾಗಿ, ಆಡಳಿತಾತ್ಮಕವಾಗಿ, ಸಾಮಾನ್ಯ ಜನರಿಗೆ ಇದರಿಂದ ಅನುಕೂಲವಾಗುತ್ತದೋ, ಪ್ರತಿಕೂಲವಾಗುತ್ತದೋ ಎಂದು ನೋಡಬೇಕೇ ಹೊರತಾಗಿ, ಯಾರಾದರೂ ಕೆಲವು ರಾಜಕೀಯ ನಾಯಕರಿಗೆ, ಅವರ ಮನೆ ಎಲ್ಲೆಲ್ಲಿ ಇದೆ, ಅವರಿಗೆ ಅನುಕೂಲವಾಗುತ್ತದೆ, ಪ್ರತಿಕೂಲವಾಗುತ್ತದೆನ್ನುವ ಕಾರಣಕ್ಕೆ ಇದು ಆಗಬಾರದು ಎನ್ನುವುದನ್ನು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ದಯವಿಟ್ಟು, ಪ್ರಕಾಶ್‌ರವರು ನಮಗೆ ಉತ್ತರ ಕೊಡಬೇಕು. ಅವರೇ ನನಗೆ ಭರವಸೆ ಕೊಟ್ಟಿದ್ದು. ಶಾಸಕರಾದ ನಮ್ಮ ಜೊತೆ ಚರ್ಚೆ ಮಾಡೇ ಇವರ ಫೈನಲ್ ನಿರ್ಣಯವನ್ನು ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಿರಿ. ಅದಕ್ಕೆ ತಾವು ಉತ್ತರಕೊಡಿ.

ಶ್ರೀ ಎಂ. ಪಿ. ಪ್ರಕಾಶ್ (ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಗದಗ ಅಥವಾ ಹೊಸ ಜಿಲ್ಲೆಗಳನ್ನು ಮಾಡತಕ್ಕ ಸಂದರ್ಭದಲ್ಲಿ ಇನ್ನೂ

ಅಂತಿಮವಾಗಿರತಕ್ಕ ನೋಟೀಸ್ ಆಗಿಲ್ಲ ಮತ್ತು ಆಕ್ಷೇಪಣೆಗಳು ಇರತಕ್ಕಂಥಾದ್ದನ್ನು ಪರಿಶೀಲನೆ ಮಾಡುತ್ತಾರೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರ ವಹಿಸಿಕೊಟ್ಟಿರುವುದರಿಂದ, ಅವರು ಇದರ ಬಗ್ಗೆ ಪೂರ್ವಾಪರ ಚರ್ಚೆ ಮಾಡಿ ತಮ್ಮ ಜೊತೆ ಚರ್ಚೆ ಮಾಡಿದ ನಂತರ ಅಂತಿಮ ನೋಟೀಸನ್ನು ಮಾಡುತ್ತಾರೆಂದು ಮತ್ತು ನಾನು ಹೇಳಿದ್ದೆ. ಅದೇ ಪ್ರಕಾರವಾಗಿ, ಪ್ರಾಯಶಃ ಬಂದಿರತಕ್ಕ ಎಲ್ಲಾ ಆಕ್ಷೇಪಣೆಗಳು ಅಥವಾ ಅದರ ಪರವಾಗಿರತಕ್ಕ ವಿಷಯಗಳನ್ನು ಅವರು ಪರಿಶೀಲನೆ ಮಾಡಿ, ತಮ್ಮದೇ ಆದಂಥ ವಿವೇಕಯುತವಾದ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ಅದರ ನಂತರ, ಈಗ ನಮ್ಮ ಸಹಕಾರ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಇದೊಂದು ಜಂಟಿ ಜವಾಬ್ದಾರಿ. ಅವರು ಕೊಟ್ಟರೂ ಕೂಡ ನಾನು ಕೊಟ್ಟ ಹಾಗೆಯೇ.

ಅಧ್ಯಕ್ಷರು : ಡಿ.ಆರ್. ಪಾಟೀಲರು ಹೇಳಿದರೆ ತೆಗೆಯುವುದು, ಎಸ್.ಎಸ್ ಪಾಟೀಲರು ಹೇಳಿದರೆ ಸೇರಿಸುವುದು ಅಂತ ಹೇಳಿದರಲ್ಲ, ಲೋಕಾಭಿರಾಮವಾಗಿ ಅದನ್ನು ಹೇಳಿದ್ದುದು, ನಿಮ್ಮ ಮೇಲೆ ಆರೋಪಣೆ ಮಾಡಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಅವರು ನೇರವಾಗಿ ಆರೋಪಣೆ ಮಾಡಿದರು. ಅದರಲ್ಲಿ ಏನೂ ಪ್ರಶ್ನೆ ಇಲ್ಲ.

ಅಧ್ಯಕ್ಷರು : ಡಿ.ಆರ್. ಪಾಟೀಲರು ಆ ತರಹ ಮಾಡುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ನಾನು ಆರೋಪ ಮಾಡುತ್ತಿಲ್ಲ. ನಾನು ಹೆಸರು ಹೇಳಬೇಕಾಗಿತ್ತಲ್ಲ, ಈ ಕ್ಷಣ ನಿಮ್ಮ ಹೆಸರು ಕಂಡಿರಲ್ಲ ಅದಕ್ಕೆ ಹೇಳಿದೆ. ಆದರೆ, ಯಾವ ಕಾರಣಕ್ಕೆ?...

ಅಧ್ಯಕ್ಷರು : ನೀವು ಹಾಗೆ ಮಾಡುವವರಲ್ಲ, ಅವರೂ ಹಾಗೆ ಮಾಡುವವರಲ್ಲ.

ಶ್ರೀ ಡಿ.ಆರ್.ಪಾಟೀಲ್ : ಅಧಿಸೂಚನೆ ಫೈನಲ್ ಆಗಿ ಹೊರಡಿಸುವುದಕ್ಕೆ ಮುಂಚಿತವಾಗಿ ಪ್ರಕಾಶ್ ಸಾಹೇಬರು ನಿಮ್ಮ ಜೊತೆ ಚರ್ಚೆಮಾಡುತ್ತೇವೆ ಅನ್ನುವಂತಹ ಭರವಸೆ ಕೊಟ್ಟಿದ್ದರು ಈಗಲೂ ಮಾತನಾಡುವಾಗ ಹೇಳಿದ್ದಾರೆ. ಆ ಭರವಸೆ ಈಡೇರಬೇಕೆಂಬುದು ನನ್ನ ಇಚ್ಛೆ. ನೀವು ನಮ್ಮನ್ನು ಕನ್‌ಸಲ್ಟ್ ಮಾಡದೇ, ಅಧಿಸೂಚನೆ ಹೊರಡಿಸಿ, ಆಮೇಲೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎನ್ನುವ ಹಾಗೆ ಆಗಬಾರದು ದಯವಿಟ್ಟು.

ಅಧ್ಯಕ್ಷರು : ಎಸ್.ಎಸ್. ಪಾಟೀಲರೂ ಹಾಗೆ ಮಾಡುವವರಲ್ಲ! ಎಸ್.ಎಸ್ ಪಾಟೀಲರು ಮಾಡುತ್ತಾರೆಂದು ಹೇಳಿದರೆಂದು ಡಿ.ಆರ್.ಪಾಟೀಲರು ಹೇಳುವವರೂ ಅಲ್ಲ. ನೀವಿಬ್ಬರೂ ಒಳ್ಳೆಯ ಗೌಡರಿದ್ದೀರಿ. ಮುಂದಿನ ಸಬ್ಜೆಕ್ಟ್‌ಗೆ ಹೋಗೋಣ.

ಶ್ರೀ ಡಿ.ಆರ್. ಪಾಟೀಲ್ : ಚರ್ಚೆ ಮಾಡಿದ ಹಾಗೆ ಆಗುತ್ತದೆಂದು ತಾವು ಬಯ್ಯುತ್ತೀರಿ. ಆದರೆ, ಇವತ್ತಿ ದಿನ ಫೈನಲ್ ನೋಟಿಫಿಕೇಷನ್ ಆಯಿತು ಎಂದುಕೊಳ್ಳಿ, ನಾಳೆ ನಿಮಗೂ, ನಮಗೂ ಏನೂ ಮಾಡುವುದಕ್ಕಾಗುವ ದಿಲ್ಲ.

ಅಧ್ಯಕ್ಷರು : ಅವರು ಆಗಿಲ್ಲವೆಂದು ಹೇಳುತ್ತಾರೆ.

ಶ್ರೀ ಡಿ.ಆರ್. ಪಾಟೀಲ್ : ನಾಳೆ ನಮ್ಮ ರಕ್ಷಣೆಗೆ ಯಾರೂ ಬರಲಿಕ್ಕೆ ಆಗುವುದಿಲ್ಲ. ಇನ್ನೂ ಪ್ರಿಂಟ್ ಆಗುವುದಕ್ಕೆ ಪೂರ್ವದಲ್ಲಿ ಆದೇಶವನ್ನು ತರಿಸಿ, ಕೂಲಂಕಷವಾಗಿ ವಿಚಾರ ಮಾಡಿ ನಿರ್ಣಯ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು : ಜಿಲ್ಲಾ ಉಸ್ತುವಾರಿ ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಆ ದಿವಸ ಮಂತ್ರಿಮಂಡಲದ ಸಭೆಯಲ್ಲಿ ಜಿಲ್ಲಾ ಮಂತ್ರಿಗಳನ್ನು ಕರೆದು ನಿರ್ಣಯ ತೆಗೆದುಕೊಳ್ಳಬೇಕೆಂದು ಚರ್ಚಿಸಲಾಯಿತು. ಆ ಪ್ರಕಾರ ಸಂಪೂರ್ಣವಾಗಿ ಮುಖ್ಯಮಂತ್ರಿಗಳಿಗೆ ಅಧಿಕಾರವನ್ನು ಕೊಟ್ಟಿದೆ. ಆದರೆ, ಮುಖ್ಯಮಂತ್ರಿಗಳು ಸಂಬಂಧಪಟ್ಟ ಎಲ್ಲಾ ಜಿಲ್ಲಾ ಮಂತ್ರಿಗಳನ್ನು ಕರೆದು ಆ ದಿವಸ ಚರ್ಚೆ ಮಾಡಿ, ಆ ವರದಿ ಪ್ರಕಾರ ಮಾಡಿದ್ದಾರೆ. ಆ ವರದಿಯಲ್ಲಿ ನವಲಗುಂದ ಧಾರವಾಡದಲ್ಲಿ ಸೇರಬೇಕು ಎಂದಿದೆ. ಎರಡೂ ವರದಿಗಳಲ್ಲೂ ನವಲಗುಂದ ಧಾರವಾಡದಲ್ಲಿ ಸೇರಬೇಕು ಎಂದು ಇದೆ. ಇವತ್ತು ಅಲ್ಲಿನ ಜನರು ಸತ್ಯಾಗ್ರಹ ಮಾಡುವುದು, ದಾಂಧಲೆ ಮಾಡುವುದು, ಇಲ್ಲ. ನಮಗೆ ಗದಗ ಬೇಡ, ನಾವು ಧಾರವಾಡಕ್ಕೆ ಹೋಗುತ್ತವೆಂದು ದಾಂಧಲೆ ಮಾಡುತ್ತಾರೆ. ಶಿಗ್ಗಾಂವ ಶಾಸಕರು ಇಲ್ಲೇ ಇದ್ದಾರೆ, ಅವರು ಕೂಡ ನಾವು ಹಾವೇರಿಗೆ ಹೋಗುತ್ತವೆಂದು ದಾಂಧಲೆ ಮಾಡಿದರು. ಬಹುಶಃ ನಾನು ಇವರೊಬ್ಬರೊಡನೆ ಮಾತ್ರ ಮಾತನಾಡಿಲ್ಲ. ಆದರೆ, ಶ್ರೀ ಎಚ್.ಕೆ. ಪಾಟೀಲರ ಜೊತೆಯಲ್ಲಿ ನವಲಗುಂದವನ್ನು ಆ ಕಡೆ ಸೇರಿಸಿಬಿಡೋಣ, ಸುಮ್ಮನೆ ಏಕೆ ಗೊಂದಲ ಎಂದು ನಾನು ಮಾತನಾಡಿದ್ದೇನೆ. ಇದನ್ನು ನಾನು ವೈಯಕ್ತಿಕವಾಗಿ ಹೇಳುವುದು. ಆದರೆ, ಮಾನ್ಯ ಮುಖ್ಯಮಂತ್ರಿಗಳು ಯಾವ ಶಾಸಕರನ್ನೂ ಕರೆಸಿಲ್ಲ. ಜಿಲ್ಲಾ ಮಂತ್ರಿಗಳನ್ನು ಕರೆಸಿ, ನಾವು ವರದಿಯ ಪ್ರಕಾರವೇ ಮಾಡಿದ್ದೇವೆ. ಎರಡೂ ವರದಿಗಳಲ್ಲೂ ಕೂಡ ನವಲಗುಂದ ಧಾರವಾಡದಲ್ಲಿ ಸೇರಬೇಕು ಎಂದು ಇದೆ. ಆ ದೃಷ್ಟಿಯಿಂದ ನಾವು ಮಾಡಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ಝೀರೋ ಅವರ್‌ನಲ್ಲಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ನನಗೆ ಹಕ್ಕಿಲ್ಲ. ಆದರೂ, ನಾನು ಮಿತಿಮೀರಿ ಮಾತನಾಡುತ್ತಿದ್ದೇನೆ. ಇವತ್ತು ಎರಡು ವರದಿಗಳ ಪ್ರಕಾರ, ನಿರ್ಣಯವನ್ನು ತೆಗೆದುಕೊಂಡಿದ್ದೇವೆಂದು ತಾವು ಹೇಳಿದಿರಿ. ಹಾಗಾದರೆ, ಡ್ರಾಫ್ಟ್ ನೋಟಿಫಿಕೇಷನ್ ಮಾಡುವ ಮುಂಚೆ ನವಲಗುಂದ ಗದಗಿನಲ್ಲಿ ಇರಬೇಕೆಂದು ಏಕೆ ನಿರ್ಣಯ ಮಾಡಿದಿರಿ? ಅದನ್ನು ವರದಿ ವಿರುದ್ಧ ಏಕೆ ಮಾಡಿದಿರಿ? ನವಲಗುಂದ ಗದಗಿನೊಳಗೆ ಇಟ್ಟಿರಿ ಎಂದು ನಾವು ಏನೂ ರೆಪ್ರೆಸೆಂಟ್ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, ಏನಾದರೂ ಅಬ್ಜೆಕ್ಷನ್ಸ್ ಇದ್ದರೆ ಕೊಡಬೇಕಾಗುತ್ತದೆ. ನೀವು ನವಲಗುಂದವನ್ನು ಹೊರಗಿಟ್ಟಿದ್ದರೆ, ನಾನು ಬಂದು ಹೇಳುತ್ತಿದ್ದೆ. If you are changing any draft notification, then only you consult us. If you are not changing draft notification, consultation is not necessary. ಅಂತ ನಾನು ಹೇಳಿದ್ದು. But,you are now changing. What is the reason for that change? ಅದನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮೊದಲು ಅಬ್ಜೆಕ್ಷನ್ ಕಾಲ್-ಫಾರ್ ಮಾಡುವಾಗ, ಅಧಿಕಾರಿಗಳು ಒಂದು ವರದಿಯನ್ನು ಕ್ಯಾಬಿನೆಟ್‌ನಲ್ಲಿಟ್ಟರು. ಈಗ ಅಬ್ಜೆಕ್ಷನ್ ಕೇಳುತ್ತೇನೆ, ಮಾಡಬೇಡಿರಿ ಎಂದು ಹೇಳಿದರು, ಆಗ ನಾವು ವರದಿಯನ್ನು ಪರಿಶೀಲನೆ ಮಾಡುವುದಕ್ಕೆ ಹೋಗಲಿಲ್ಲ. ಅಧಿಕಾರಿಗಳ ಅಭಿಪ್ರಾಯದ ಪ್ರಕಾರ, ನಾವು ನೋಟಿಫಿಕೇಷನ್ ಮಾಡಿದೆವು. ತದನಂತರ, ಅಬ್ಜೆಕ್ಷನ್ ಬಂದವು. ಅಬ್ಜೆಕ್ಷನ್ಸ್ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಕರೆದು, ಆ ಅಬ್ಜೆಕ್ಷನ್ ಎಲ್ಲವನ್ನೂ ನಮ್ಮೆದುರಿಗೆ ಇಟ್ಟು, ವರದಿ ಪ್ರಕಾರ ಏನೇನು ಇದೆ ನೋಡಿ ಎಂದರು, ಅದರಂತೆ ನಾವು ಮಾಡಿದ್ದೇವೆ. ಆಮೇಲೆ, ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಶಿಗ್ಗಾಂವ, ವರದಿಯಲ್ಲಿ ಹುಬ್ಬಿಗೆ ಸೇರಬೇಕೆಂದು ಇದೆ. ಆದರೆ, ಎಲ್ಲ ಜನ ಕೂಡ ಇಲ್ಲ ನಾವು ಹಾವೇರಿಗೆ ಹೋಗುತ್ತೇವೆಂದರೆ, ನಾವು ಜನರ ಭಾವನೆಗಳಿಗೆ ಸ್ಪಂದನೆ ಮಾಡುವುದಕ್ಕೆ...

(ಗೊಂದಲ)

ಅಧ್ಯಕ್ಷರು : ಪ್ರಕಾಶ್‌ರವರೇ, ತಾವು ಸ್ವಲ್ಪ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಶಾಸಕರ ಸಭೆ ಕರೆದು you try to settle.

ಶ್ರೀ ಡಿ.ಆರ್. ಪಾಟೀಲ್ : ಧಾರವಾಡಕ್ಕೆ ಕೊಡುವುದಕ್ಕೆ ಆ ವರದಿಯನ್ನಾಧರಿಸಿದ್ದೇವೆ ಎಂದರು. ಶಿಗ್ಗಾಂವ ಹಾವೇರಿಯೊಳಗೆ, ವರದಿ ವಿರುದ್ಧ ನಿರ್ಣಯ ತೆಗೆದುಕೊಂಡೆವು ಎಂದರು. ಅಂದರೆ, ಏನು ಸಾರ್ ಗೈಡ್‌ಲೈನ್ಸ್?

(ಗೊಂದಲ)

4.10 ಪಿ.ಎಂ

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಪ್ರಾಥಮಿಕವಾಗಿ ಅಧಿಸೂಚನೆಯನ್ನು ಹೊರಡಿಸಿದ ಮೇಲೆ ಯಾರಾದರೂ ಈ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸುವುದಿದ್ದರೆ ಸಲ್ಲಿಸಬಹುದೆಂದು ತಿಳುವಳಿಕೆ ಕೊಡಲಾಗಿತ್ತು. ಅಧಿಸೂಚನೆಯ ಪರವಾಗಿ ಮತ್ತು ವಿರೋಧವಾಗಿ ಅನೇಕ ಆಕ್ಷೇಪಣೆಗಳು ಬಂದಿವೆ. ಅಂತಿಮವಾದ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಸಂಪೂರ್ಣವಾದ ಅಧಿಕಾರವನ್ನು ಮುಖ್ಯಮಂತ್ರಿಗಳಿಗೆ ಬಿಟ್ಟಿದ್ದೇವೆ. ಆಕ್ಷೇಪಣೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಕ್ರಮ ತೆಗೆದುಕೊಂಡಿದ್ದರೆ, ಈ ಬಗ್ಗೆ ಅವರು ಬೇರೆ ರೀತಿಯಲ್ಲಿ ಯೋಚನೆ ಮಾಡಬಹುದು. ಅಂತಿಮ ಅಧಿಸೂಚನೆಯನ್ನು ಇನ್ನೂ ಹೊರಡಿಸಿಲ್ಲ, ಸಂಬಂಧಪಟ್ಟವರನ್ನು ಕರೆಸಿ ಲಭ್ಯವಿರುವ ಮಾಹಿತಿ ಮತ್ತು ಕಡತವನ್ನು ಪರಿಶೀಲಿಸಿದ ನಂತರ, ಅಂತಿಮವಾದ ಅಧಿಸೂಚನೆಯನ್ನು ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತಾರೆಂದು ನಾನು ಹೇಳಿದ್ದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಅಧಿಸೂಚನೆಗೆ ಒಪ್ಪಿಗೆ ಕೊಟ್ಟಿದ್ದಾರೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ.

ಅಧ್ಯಕ್ಷರು : ಹೊರಡಿಸಿದ್ದಾರೆಂದಲ್ಲ. ಅಧಿಸೂಚನೆಯನ್ನು ಹೊರಡಿಸುವವರಿದ್ದಾರೆಂದು ಅವರು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಆಗಿರಬಹುದು. ಅದು ಏನಾಗಿದೆ? ಯಾವ ಮಟ್ಟದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಆದ್ದರಿಂದ, ತಮ್ಮ ಆಕ್ಷೇಪಣೆಗಳನ್ನು ತೆಗೆದುಕೊಂಡು ಮಾಡುತ್ತಾರೆ. ಇದರಲ್ಲ ಏನೂ ಭಿನ್ನಾಭಿಪ್ರಾಯ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನವಲಗುಂದ ಶಾಸಕರು ಇಲ್ಲೇ ಇದ್ದಾರೆ. ಅವರನ್ನು ಬೇಕಾದರೆ ಕೇಳಬಹುದು. ಆ ವಿಷಯದಲ್ಲಿ ನಾವು ಯಾರೂ ಭಾಗವಹಿಸಲಿಕ್ಕೆ ಹೋಗಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ವರ್ಕ್ ಲೋಡ್ ಹಂಚಿಕೆಯಾಗಬೇಕನ್ನುವ ಉದ್ದೇಶದಿಂದ ಪರಿಶೀಲನೆ ಮಾಡಲಾಯಿತು. ಇದರಿಂದ ಜನಸಾಮಾನ್ಯರಿಗೆ ಅನುಕೂಲವಾಗಬೇಕು. ಡಿಸ್ಟೆನ್ಸ್ ನೋಡಿಕೊಂಡು, ಆದಷ್ಟು ಮಟ್ಟಿಗೆ ಪಾಪ್ಯುಲೇಷನ್ ನೋಡಿಕೊಂಡು ಮಾಡಬೇಕು. ಪುನಃ ಅಸಮತೋಲನ ಇಟ್ಟು ಒಂದುಕಡೆ 12 ತಾಲ್ಲೂಕು, ಇನ್ನೊಂದು ಕಡೆ 6 ತಾಲ್ಲೂಕು ಮಾಡುವುದು ಸರಿಯಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಶಿಗ್ಗಾವಿಯನ್ನು ಹಾವೇರಿ ಜಿಲ್ಲೆಗೆ ಸೇರಿಸಿರುವುದರಿಂದ ಸರ್ಕಾರಕ್ಕೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಶ್ರೀ ಪುಟ್ಟಣ್ಣಯ್ಯನವರೇ ಆ ಮದುವೆ ಗಲಾಟೆ ವಿಷಯವನ್ನು ಪ್ರಸ್ತಾಪ ಮಾಡಿ.

ಮಂಡ್ಯ ಜಿಲ್ಲೆಯ ಬೊಪ್ಪಸಮುದ್ರ ಗ್ರಾಮದ ಕುಳ್ಳೇಗೌಡರ ಮಗ ಪುಟ್ಟೇಗೌಡ ಅನಿತಾ ಎಂದ ಹುಡುಗಿಯನ್ನು ಪ್ರೀತಿಸಿ ಮದುವೆಯಾಗದೇ ಇರುವುದು.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ಬೊಪ್ಪಸಮುದ್ರ ಗ್ರಾಮದಲ್ಲಿ ಕುಳ್ಳೇಗೌಡರ ಮಗ ಪುಟ್ಟೇಗೌಡ ಎನ್ನುವವನು ಅವರ ಸಂಬಂಧಿಕರಲ್ಲೇ ಇದ್ದ ಅನಿತಾ ಎನ್ನುವ ಹುಡುಗಿಯನ್ನು ಒಂದೂವರೆ ವರ್ಷದಿಂದ ಪ್ರೀತಿಸುತ್ತಿದ್ದು, ಆ ಹುಡುಗಿ ಎಂಟೂವರೆ ತಿಂಗಳು ಗರ್ಭವತಿಯಾಗಿದ್ದಳು. ಇವರ ಮದುವೆಯನ್ನು ಈಗ ಮಾಡಿದ್ದೇ ಆದಲ್ಲಿ ಇನ್ನು 20 ದಿವಸಗಳಲ್ಲೇ ಮಗುವಾದರೆ, ನಮ್ಮ ಮನೆತನಕ್ಕೆ ಅವಮಾನವಾಗುತ್ತದೆಂದು, ಈಗ ನೀನು ಗರ್ಭಪಾತ ಮಾಡಿಸಿಕೊಂಡರೆ, ನಂತರ ನಿನ್ನನ್ನೇ ನನ್ನ ಮಗನಿಗೆ ಮದುವೆ ಮಾಡಿಕೊಳ್ಳುತ್ತೇವೆಂದು ಹುಡುಗನ ಮನೆಯವರು ಮತ್ತು ಐದಾರು ಜನ ಅವರ ಸಂಬಂಧಿಕರು ಹೇಳಿ, ಆಕೆಗೆ ಗರ್ಭಪಾತವನ್ನು ಮಾಡಿಸಿ ಈಗ ಕೈಬಿಟ್ಟಿದ್ದಾರೆ. ಅದಕ್ಕಾಗಿ ಆಕೆ, ಒಂದು ವಾರದಿಂದ ಅವರ ಮನೆ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾಳೆ. ಒಂದು ವಾರದಿಂದ ಉಪವಾಸ ಮಾಡುತ್ತಿದ್ದರೂ ಅವರ ಮನೆಯವರು ಏನೂ ಪ್ರತಿಕ್ರಿಯೇ ವ್ಯಕ್ತಪಡಿಸಿಲ್ಲ. ಈಗ ಇದರ ಬಗ್ಗೆ ಮಹಿಳಾ ಸಂಘಟನೆಯವರು ಗಮನಹರಿಸಿ, ನೀನು ಬದುಕಲಿಕ್ಕಾಗಿ ಹೋರಾಟ ಮಾಡುತ್ತಿರುವುದರಿಂದ ಊಟ ಮಾಡಬೇಕೆಂದು ಹೇಳಿ ಜ್ಯೂಸ್ ಕುಡಿಸಿ, ತಿಂಡಿಯನ್ನು ತಿನ್ನಿಸಿ ಅವರ ಜಗಲಿ ಮೇಲೆ ಕೂರಿಸಿದ್ದಾರೆ. ಈ ಬೊಪ್ಪಸಮುದ್ರ ಗ್ರಾಮವು ಮಾನ್ಯ ನಾಗೇಗೌಡರ ಕ್ಷೇತ್ರದಲ್ಲಿ ಬರುತ್ತದೆ. ಮಾನ್ಯ ನಾಗೇಗೌಡರ ಕ್ಷೇತ್ರದಿಂದ ಇಂಥ ಕೆಲಸ ಮಾಡಿದ ಪುಟ್ಟೇಗೌಡ ಈಗ ಮಾಯ ಆಗಿದ್ದಾನೆ. ಮಾಯ ಅವನು ಆಗಿಲ್ಲ, ಅದನ್ನು ಅವರ ಮನೆಯವರೆಲ್ಲಾ